ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

4

ಇಲಾಖೆ / ವಿಷಯ : DEPARTMENT / SUBJECT: ಹಕ್ಕು ಬಾಧ್ಯತಾ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ     ದಿನಾಂಕ : DATE 20/8/2020


- ಹರಿಪ್ರಕಾಶ- ... ಪಕರು. -ನಾರಾಯಣ ಚೌಗಲೆ ಪೆಂಡಾಲ್ ಮತ್ತು ಎಲೆಕ್ಟ್ರಿಕ್ ವೆಲ್ಫೇರ್ ಸಂಘದ ಅಧ್ಯಕ್ಷ, ಬೆಳಗಾವಿ

### ವೈಯಕ್ತಿಕ ಪ್ರತಿಷ್ಠೆಗಾಗಿ ಸದನದ ಘನತೆ ತಲೆಬಾಗುವಂತಾಗಬಾರದು...

# ಶಾಸನ ಸಭೆಯ ಘನತೆಗೆ ಚ್ಯುತಿಯಾಗದಿರಲಿ


■ **ಎಚ್.ಕೆ.ಪಾಟೀಲ್** ಶಾಸಕರು, ಮಾಜಿ ಸಚಿವರು




ಸ್ವಾತಂತ್ರ್ಯ ನಂತರ ನಾವು ಒಪ್ಪಿದ ಸಂವಿಧಾನ ನಮ್ಮ ಹಕ್ಕುಗಳನ್ನು ರಕ್ಷಣೆ ಮಾಡುವುದರಲ್ಲಿ ಇಲ್ಲಿಯವರೆಗೆ ಅತ್ಯಂತ ಯಶಸ್ವಿಯಾಗಿದೆ. ಶಾಸಕರ, ಸಂಸದರ ಅಧಿಕಾರಗಳು, ಹಕ್ಕುಗಳು ಮತ್ತು ಬಾಧ್ಯತೆಗಳನ್ನು ಸಾಂಪ್ರದಾಯಿಕವಾಗಿ ಕಾಲಕಾಲಕ್ಕೆ ನೈತಿಕ ಮತ್ತು ಮೌಲ್ಯಗಳ ಆಧಾರದಲ್ಲಿ ಪೋಷಿಸಿಕೊಂಡು ಬರಲಾಗುತ್ತಿದೆ. ಶಾಸಕರ/ಸಂಸದರ ಹಕ್ಕು ಬಾಧ್ಯತೆಗಳನ್ನು ನಿಖರವಾಗಿ ವ್ಯಾಖ್ಯಾನಿಸಲಾಗಿಲ್ಲ, ಆದರೆ ಸತ್ಯ, ನಿಷ್ಠೆ ನ್ಯಾಯ ಮುಂತಾದ ಮೌಲ್ಯಗಳ ತಳಹದಿ ಮೇಲೆ ಸ್ವಯಂ ನಿಯಂತ್ರಣದಿಂದ ಅವುಗಳನ್ನು ರಕ್ಷಿಸಲಾಗುತ್ತಿದೆ.

ಈ ಅಧಿಕಾರಗಳು, ಹಕ್ಕುಗಳು ಮತ್ತು ಬಾಧ್ಯತೆಗಳನ್ನು ವ್ಯಾಖ್ಯಾನಿಸುವ ಒಂದು ಪ್ರಯತ್ನ 1986ರಲ್ಲಿ ಕರ್ನಾಟಕದಲ್ಲಿ ನಡೆದಿತ್ತು. ಇದೇ ಸಂದರ್ಭದಲ್ಲಿ ಮುದ್ರಣ ಮಾಧ್ಯಮದ ಮೇಲೆ ನಿಯಂತ್ರಣ ಹೇರುವ ಒಂದು ವಿಧೇಯಕವು ವಿಧಾನ ಮಂಡಲಕ್ಕೆ ಸಲ್ಲಿಸಲಾಗಿತ್ತು. ಈ ಎರಡೂ ವಿಧೇಯಕಗಳು ಕರಾಳ ಶಾಸನಗಳೆಂದು ಅಂದು ಪ್ರತಿಪಕ್ಷದಲ್ಲಿದ್ದ ಕಾಂಗ್ರೆಸ್ ಹೋರಾಟ ಸಫಲಗೊಂಡು ಆ ಎರಡೂ ವಿಧೇಯಕಗಳು ಅಂಗೀಕಾರವಾಗದೇ ಉಳಿದಿದ್ದು ಇತಿಹಾಸ. ಆದರೆ ಇಂದು ಮತ್ತದೇ ಪ್ರಶ್ನೆ ಮುನ್ನೆಲೆಗೆ ಬಂದಿದೆ. 'ವಿಜಯ ಕರ್ನಾಟಕ'ದಂತಹ ಜನಪ್ರಿಯ ದೈನಿಕ ಪತ್ರಿಕೆಯ ಸಂಪಾದಕರಿಗೆ ಹಕ್ಕುಬಾಧ್ಯತೆ ಉಲ್ಲಂಘನೆಯ ಪ್ರಶ್ನೆಯನ್ನು ಪ್ರಸ್ತಾಪಿಸಿ ವಿಧಾನಸಭೆಯ ಹಕ್ಕುಬಾಧ್ಯತಾ ಸಮಿತಿ ಮುಂದೆ ಹಾಜರಾಗುವಂತೆ ಕ್ರಮ ಕೈಗೊಳ್ಳಲಾಗಿದೆ.

ವಿಕ ಜನಪರ ವರದಿಗೆ ಹಕ್ಕುಚ್ಯುತಿ ಅಸ್ತ್ರ ಪ್ರಯೋಗ

ಸಂವಿಧಾನದತ್ತವಾಗಿರುವ ಹಕ್ಕುಗಳು ನಾಗರಿಕರಿಗೆ ಇರುವ ದೊಡ್ಡ ಶಕ್ತಿ. ಅದುವೇ ಪ್ರಜಾಪ್ರಭುತ್ವದ ಶಕ್ತಿ. ಹಕ್ಕು ದುರುಪಯೋಗವಾಗಬಾರದು. ಲಕ್ಷ್ಮಣ ರೇಖೆ ದಾಟಬಾರದು. ಇದು ಸಂವಿಧಾನದ ಉದಾತ್ತ ಉದ್ದೇಶ.

**ಈ ಘಟನೆಯಿಂದ 3 ಪ್ರಶ್ನೆ ಉದ್ಭವ**

**1. ವರದಿ ಸದಸ್ಯರ ಹಕ್ಕುಗಳಿಗೆ ಚ್ಯುತಿ ಉಂಟುಮಾಡುವ ಅಥವಾ ಬಾಧ್ಯತೆಗೆ ಅಡ್ಡಿಪಡಿಸುವ ಇಲ್ಲವೇ ಅವರ ಕಾರ್ಯನಿರ್ವಹಣೆ ಮೊಟಕುಗೊಳಿಸಿದೆಯೆ?**

**2. ಸದನದ ಕಾರ್ಯನಿರ್ವಹಣೆಯನ್ನು ಸಾರ್ವತ್ರಿಕವಾಗಿ ನೆಪಗಳ ಆಧಾರದ ಮೇಲೆ ಅನುಚಿತವಾದ, ಕಟುವಾದ ಟೀಕೆಗೆ ಈ ವರದಿ ಅಥವಾ ಲೇಖನ ಒಳಪಡಿಸಿದೆಯೇ?**

**3. ಶಾಸಕನಾಗಿ ನಿರ್ವಹಿಸಬಹುದಾದ ಕಾರ್ಯಗಳಿಗೆ ಸಂಬಂಧಪಟ್ಟಂತೆ ಕಪೋಲಕಲ್ಪಿತ ಇಲ್ಲವೇ ತಪ್ಪು ಮಾಹಿತಿ ಇರುವ ಅಂಶಗಳು ಈ ವರದಿಯಲ್ಲಿವೆಯೇ?**

ಯಾವುದೇ ಒಂದು ಹಕ್ಕುಚ್ಯುತಿ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸುವ ನಿರ್ಣಯ ನಿಷ್ಪಕ್ಷಪಾತ, ನಿರ್ವಂಚನೆಯ ಎಲ್ಲಾ ಆಯಾಮಗಳನ್ನು ಚಿಕಿತ್ಸಕ ಮನೋಭಾವದಿಂದ ಸಂಪೂರ್ಣವಾಗಿ ಪರಿಶೀಲಿಸಿ, ಪರಿಗಣಿಸಿ ಪೂರ್ವನಿದರ್ಶನ, ಸಂಪ್ರದಾಯ ಮತ್ತು ನೈತಿಕ ಮೌಲ್ಯಗಳ ತುಲನಾತ್ಮಕ ಅಧ್ಯಯನದ ನಂತರ ಎಚ್ಚರಿಕೆಯಿಂದ ಪರಿಶೀಲಿಸಿ ಹೆಜ್ಜೆ ಇಡಬೇಕಾದ ಅವಶ್ಯಕತೆ ಇದೆ. ಪ್ರಜಾಪ್ರಭುತ್ವದ 4ನೇ ಅಂಗವೆಂದು ಕರೆಸಿಕೊಳ್ಳುವ ಮಾಧ್ಯಮದ ವರದಿಯೊಂದರ ಆಧಾರದ ಮೇಲೆ ಆ ಪತ್ರಿಕೆಯ ಸಂಪಾದಕರಿಗೆ ಹಕ್ಕುಬಾಧ್ಯತೆ ನೋಟೀಸ್ ನೀಡುವ ಅಥವಾ ಅವರನ್ನು ಸಮಿತಿಯ ಮುಂದೆ ಕರೆಸಿ ವಿಚಾರಣೆ ಮಾಡುವ ಅಧಿಕಾರ ಚಲಾಯಿಸುವ ಮುನ್ನ ಪ್ರಸ್ತುತ ಪ್ರಕರಣದಲ್ಲಿ ಅವಸರದ ಮತ್ತು ಬೇರೆ ಬೇರೆ ಕಾರಣಗಳಿಂದ ಕೈಗೊಳ್ಳಲಾದ ನಿರ್ಣಯವಾಗಿರಬಹುದು ಎಂಬ ಅನುಮಾನ ಸಹಜವಾಗಿ ಮೂಡುತ್ತದೆ.

ಕರ್ನಾಟಕದಲ್ಲಿ ಇತ್ತೀಚಿನ ದಿನಗಳಲ್ಲಿ ನಾಗರಿಕ ಹಕ್ಕು ರಕ್ಷಣೆಯಾಗುತ್ತಿಲ್ಲ, ಸರಕಾರಗಳಿಂದ ಕಾನೂನಾತ್ಮಕ ಆಡಳಿತ ಸಿಗುತ್ತಿಲ್ಲ, ಅನೇಕ ಇಲಾಖೆಗಳಲ್ಲಿ ಕಾನೂನು ವ್ಯವಸ್ಥೆ ಕುಸಿದುಬಿದ್ದಿದೆ. ಭ್ರಷ್ಟಾಚಾರ ತಾಂಡವವಾಡುತ್ತಿರುವುದರಿಂದ ಗೌರವಾನ್ವಿತ ಸ್ಪಂದನೆಯಿಲ್ಲ, ಶಾಸಕರು, ಅಧಿಕಾರಿಗಳು ಸಹಿತ ಕೆಡುತ್ತಿರುವ ವ್ಯವಸ್ಥೆ ಬಗ್ಗೆ ಬೇಸತ್ತಿದ್ದಾರೆ. ಪ್ರತಿಯೊಬ್ಬರು ನೈತಿಕ ಸಂದಿಗ್ಧತೆಯನ್ನು ಅನುಭವಿಸುತ್ತಿದ್ದಾರೆ.

ಶಾಸಕರ ಹಕ್ಕು ಉಲ್ಲಂಘನೆಯಾಗುತ್ತಿದೆ. ಶಾಸಕಾಂಗವನ್ನು ಅಶಕ್ತಗೊಳಿಸಲಾಗುತ್ತಿದೆ. ಶಾಸನ ಸಭೆ 60 ದಿನ ನಡೆಸಬೇಕೆನ್ನುವ ಕಾನೂನು ಮಾಡಲಾಗಿದೆ. ಸಂವಿಧಾನಿಕ ಅಧಿಕಾರದಲ್ಲಿರುವ ರಾಜ್ಯಪಾಲರಾಗಲಿ, ಸಭಾಧ್ಯಕ್ಷರಾಗಲಿ ಏಕೆ ಕಾನೂನು ಜಾರಿ ಆಗಿಲ್ಲ ಎಂದು ಪ್ರಶ್ನಿಸುತ್ತಿಲ್ಲ, ಕಾನೂನು ಪಾಲನೆ ಆಗದೆ ಶಾಸಕಾಂಗದ ಹಕ್ಕು ಉಲ್ಲಂಘನೆಯಾದರೂ ಚಕಾರ ಶಬ್ದ ಎತ್ತುತ್ತಿಲ್ಲ, ಕಾನೂನಿನ ಮೂಲಕ ನೀಡಿದ ಹಕ್ಕು ಶಾಸನ ಸಭೆ 60 ದಿನ ನಡೆಯಬೇಕು, ಕಾನೂನಿನ ಅನುಷ್ಠಾನ ಕುರಿತು ವಿವರಣೆಯನ್ನು ಮುಖ್ಯಮಂತ್ರಿಗಳಿಗೆ ಶಾಸನ ಸಭೆಗಳ ಅಧಿಪತಿಗಳಾಗಲಿ, ರಾಜ್ಯಪಾಲರಾಗಲಿ ಕೇಳಲಿಲ್ಲ, ಜನರ ಹಿತದೃಷ್ಟಿಯಿಂದ ನಡೆಯಬೇಕಾದ ಶಾಸನ ಸಭೆ ನಡೆಯಲಿಲ್ಲ ಅಂದರೆ ಅದು ನಾಗರಿಕನ ಹಕ್ಕಿನ ಉಲ್ಲಂಘನೆಯಾಯಿತಲ್ಲವೇ? ಶಾಸಕರ ಹಕ್ಕು ಉಲ್ಲಂಘನೆಯಾಗಿ ಅದರ ಕುರಿತ ಕ್ರಮ ಹೋಗಲಿ, ವಿಮರ್ಶೆ ಸಹಿತ ನಡೆಯಲಿಲ್ಲ,

ಆದರೆ ಸಚಿವಾಲಯದ ಕಾರ್ಯನಿರ್ವಹಣೆ ಕುರಿತು ವಾಸ್ತವಾಂಶದ ಪ್ರಕಟಿತ ವರದಿಗೆ ಪತ್ರಿಕೆಯೊಂದರ ಸಂಪಾದಕರಿಗೆ ಹಕ್ಕುಚ್ಯುತಿ ನೋಟೀಸ್ ನೀಡಲಾಗುತ್ತದೆ. ಅವರನ್ನು ವಿಚಾರಣೆಗೆ ಕರೆಸಲಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಮಹತ್ವದ ಉತ್ತರದಾಯಿತ್ವ ಹೊಂದಿದ ಇಂದಿನ ವ್ಯವಸ್ಥೆಯಲ್ಲಿ ಶಾಸನ ಸಭೆಯ ಘನತೆ, ಗೌರವಗಳು ಯಾವಾಗಲೂ ಉತ್ತುಂಗದಲ್ಲಿರಬೇಕು. ಆದರೆ ಇಂದು ಉಂಟಾಗಿರುವ ನೈತಿಕ ಸಂದಿಗ್ಧತೆಯನ್ನು ಪರಿಹರಿಸುವ ಆದರ್ಶಪ್ರಾಯವಾದ ನಿರ್ಣಯಗಳು ಈ ಸದನದಿಂದ ಹೊರಹೊಮ್ಮಬೇಕೆ ಹೊರತು ಇಂದಿನ ಪ್ರಸಂಗದಲ್ಲಿ ವೈಯಕ್ತಿಕ ಪ್ರತಿಷ್ಠೆಗಳಿಗಾಗಿ ಸದನದ ಘನತೆ, ಗೌರವಗಳು ತಲೆಬಾಗುವಂತಾಗಬಾರದು. ವಾಸ್ತವಾಂಶದ ಹಾಗೂ ಸತ್ಯದ ಕತ್ತು ಹಿಚುಕುವ ಪ್ರಯತ್ನ ಯಾರಿಂದಲೂ ಆಗಕೂಡದು. ಇದು ಶಾಸಕಾಂಗದ ಬಹುದೊಡ್ಡ ಆಶಯ. ಈ ಆಶಯಕ್ಕೆ ಚ್ಯುತಿ ತರುವ ಕೆಲಸ ಯಾರಿಂದಲೇ ಆದರೂ ಅದು ಪ್ರಜಾಪ್ರಭುತ್ವವೇ ತಲೆಬಾಗುವಂತೆ ಮಾಡೀತು, ಎಚ್ಚರ ಇರಬೇಕು!

ಚಿರಸ್ಮರಣೆ

ಕೆಪಿಎಸ್ಸಿ ಅಭ್ಯರ್ಥಿಗಳ ಪೇಚಾಟ

» ಮೊದಲ ಪುಟದಿಂದ